ಮೊಳಕಾಲ್ಮೂರು ಪ್ರಥಮ ದರ್ಜೆ ಮಹಾವಿದ್ಯಾಲಯ ನಿರ್ಮಾಣದ ಬಗ್ಗೆ

1788. ಶ್ರೀ ಎನ್.ಜಿ. ನಾಯ್ಕ (ಮೊಳಕಾಲ್ಮೂರು) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ಮೊಳಕಾಲ್ಮೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ನಿರ್ಮಿಸಲು ಉದ್ದೇಶಿಸಿದೆಯೇ ;

ಆ) ಹಾಗಿದ್ದಲ್ಲಿ ಕಟ್ಟಡ ನಿರ್ಮಾಣವನ್ನು ಎಂದು ಪ್ರಾರಂಭಿಸಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು.

ಆ) ಸೋಮೇನಹಳ್ಳಿಯ ಸರ್ವೆ ನಂಬರ್ 21:3 ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡದ ನಿವೇಶನವನ್ನು ಸ್ವಾಧೀನಪಡಿಸಿಕೊಳ್ಳಲು ಚಿತ್ರದುರ್ಗ ಭೂ ಸ್ವಾಧೀನಾಧಿಕಾರಿಗಳನ್ನು ಕೋರಲಾಗಿದೆ. ಭೂಸ್ವಾಧೀನಪಡಿಸಿಕೊಂಡ ನಂತರ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಒಂದು ಪ್ರಶ್ನೆಗೆ ಹೌದು ಎಂದು ಉತ್ತರ ಕೊಡುತ್ತಾ ಈಗ ಭೂಸ್ವಾಧೀನಪಡಿಸಿಕೊಂಡ ನಂತರ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಹೀಗೆ ಕ್ರಮ ತೆಗೆದುಕೊಳ್ಳುವುದು ಅಂದರೆ ಏನು ಮತ್ತು ಅದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆ? ಮತ್ತು ಯಾವಾಗ ಅದನ್ನು ಕಟ್ಟುತ್ತಾರೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಕ್ರಮ ಅಂದರೆ ಅದಕ್ಕೆ ಭೂಸ್ವಾಧೀನ ಆಗಬೇಕಾಗುತ್ತದೆ. ಅದಕ್ಕೆ ಈಗಾಗಲೇ ನಾವು ಕೋರಿಕೆಯನ್ನು ಸಲ್ಲಿಸಿದ್ದೇವೆ. ಸೋಮೇನಹಳ್ಳಿ ಸರ್ವೆ ನಂಬರ್ 21:3ರಲ್ಲಿ ಕೋರಿಕೆ ಸಲ್ಲಿಸಿ ಆಗಿದೆ. ಒಂದು ಲಕ್ಷದ 20 ಸಾವಿರ ರೂಪಾಯಿ ಅದಕ್ಕೆ ಬೇಕಾಗಿದ್ದು ಅದನ್ನು ನಾವು ತಕ್ಷಣ ಪಾವತಿ ಮಾಡುತ್ತಿದ್ದೇವೆ. ಜಾಗ ಸಿಕ್ಕಿದ ಕೂಡಲೇ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ತಾವು ಜಮೀನನ್ನು ಸ್ವಾಧೀನಕ್ಕೆ ಕೊಡಿಸಿದರೆ ಎಸ್ಟಿಮೇಟ್ ಪ್ಲಾನ್ ಇತ್ಯಾದಿಗಳನ್ನು ತಯಾರು ಮಾಡಿ ಕೆಲಸ ಪ್ರಾರಂಭ ಮಾಡುತ್ತೇವೆ.

ಸಾರಿಗೆ ತರಬೇತಿ ಕೇಂದ್ರ ಒಂದನ್ನು ದಾವಣಗೆರೆ ನಗರಕ್ಕೆ ಮಂಜೂರು ಮಾಡುವ ಬಗ್ಗೆ.

1719. ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾರಿಗೆ ಸಂಸ್ಥೆ ಸೇವಾ ಸುಧಾರಣೆ ಅಂಗವಾಗಿ ರಾಜ್ಯದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಆರು ಚಾಲಕ ನಿರ್ವಾಹಕ ತರಬೇತಿ ಕೇಂದ್ರಗಳಲ್ಲಿ ಒಂದನ್ನು ದಾವಣಗೆರೆ ನಗರಕ್ಕೆ ಮಂಜೂರು ಮಾಡಲು ಸಾಧ್ಯವೇ ?

ಆ) ಇಂತಹ ವಿಷಯಗಳನ್ನು ಸರ್ಕಾರವು ಪ್ರಕಟಿಸುವ ಮೊದಲು ಸದನದಲ್ಲಿ ಮಂಡಿಸಿ ಸದಸ್ಯರ ಅಭಿಪ್ರಾಯ ಪಡೆಯುವ ಸಂಪ್ರದಾಯ ಪಾಲಿಸಿದರೆ ಉಚಿತವಲ್ಲವೆ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ಸಧ್ಯಕ್ಕೆ ಸಾಧ್ಯವಿಲ್ಲ.

ಆ) ಇದು ಸದನದಲ್ಲಿ ಮಂಡಿಸುವಂತಹ ವಿಷಯವಲ್ಲ.

ವೈ.ಎಂ. ವೀರಣ್ಣ : ಮಾನ್ಯ ಅಧ್ಯಕ್ಷರೇ. ದಾವಣಗೆರೆಯಲ್ಲಿ ಇತ್ತೀಚಿನ ದಿನಗಳಲ್ಲಿ ವಾಹನಗಳ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಅಲ್ಲಿ ಎಲ್ಲಾ ರೀತಿಯ ವಾಹನಗಳು ಜಾಸ್ತಿಯಾಗಿದ್ದು ಅಲ್ಲಿ ನಡೆಯತಕ್ಕಂಥ ಕೈಗಾರಿಕೋದ್ಯಮವು ಸ್ಥಗಿತವಾಗಿದ್ದು. ಅನೇಕ ಜನರು ನಿರುದ್ಯೋಗಿಗಳಾಗಿದ್ದಾರೆ. ಇಂಥ ಸಂದರ್ಭದಲ್ಲಿ ಮಾನ್ಯ ಸಚಿವರು ದಾವಣಗೆರೆಯಲ್ಲಿ ಚಾಲಕ ನಿರ್ವಾಹಕರ ತರಬೇತಿ ಕೇಂದ್ರವನ್ನು ಸ್ಥಾಪನೆ ಮಾಡಿದರೆ ಅದರಿಂದ ಬಹಳ ಒಳ್ಳೆಯದಾಗುತ್ತದೆ. ಆ ಭಾಗದಲ್ಲಿ ಉತ್ತಮ ಕರ್ತವ್ಯ ನಿರ್ವಹಿಸತಕ್ಕಂಥ ಚಾಲಕರನ್ನು ಮತ್ತು ನಿರ್ವಾಹಕರನ್ನು ತಯಾರು ಮಾಡಲು ಸಾಧ್ಯವಾಗುತ್ತದೆ. ನಮ್ಮ ಅನುಕೂಲಕ್ಕಾಗಿ ಮಾನ್ಯ ಸಾರಿಗೆ ಸಚಿವರು ವಿಭಾಗೀಯ ಕಚೇರಿಯನ್ನು ಸ್ಥಾಪನೆ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಈ ತರಬೇತಿ ಕೇಂದ್ರವನ್ನು ಕೂಡ ನಮ್ಮ ಭಾಗದಲ್ಲಿ ಸ್ಥಾಪನೆ ಮಾಡಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಅಜೀಜ್ ಸೇಠ್ : ಮಾನ್ಯ ಅಧ್ಯಕ್ಷರೇ. ಕೆಎಸ್ಆರ್‌ಟಿಸಿ ಆಡಳಿತದ ಸುಧಾರಣೆ ಬಗ್ಗೆ ಹೇಳಬೇಕಾದರೆ, ಎಲ್ಲೆಲ್ಲಿ ಏನೇನು ಮಾಡಬೇಕಾಗುತ್ತದೋ, ಅದನ್ನು according to their needs and requirements ಮಾಡಬೇಕೇ ಹೊರತು ರಾಜಕೀಯವಾಗಿ ಯಾವುದನ್ನೂ ಮಾಡುವುದಕ್ಕೆ ಬರುವುದಿಲ್ಲ. ನಮ್ಮಲ್ಲಿ ಬರೇ ಡ್ರೈವರ್ಸ್ ಮತ್ತು ಕಂಡಕ್ಟರ್ಸ್‌ಗೆ ಮಾತ್ರ ಟ್ರೈನಿಂಗ್ ಕೊಡುವುದಿಲ್ಲ. ಬೇರೆ ಟ್ರೈನಿಂಗ್‌ಗಳು ಕೂಡ ಇವೆ. ಈ ಎಲ್ಲಾ ಅಂಶಗಳನ್ನು ಆಲೋಚನೆ ಮಾಡಿ ಮಾಡಬೇಕಾಗುತ್ತದೆ. Considering these aspects, the Board at its meeting held on 18-12-91 decided to establish six regional institutes in each region at Kolar, Kengeri, Hassan, Hubli. Humnabad and Bagalkot and a Central Training Institute at Mysore at a total cost of Rs. 6.46 crores. The places were selected considering their viability and the infrastructure facilities available like land, nationalised area etc. Since imparting training was one of the service conditions envisaged in Regulation No. 12 of the KSRTC C&R Regulations which has been approved by the Karnataka Government. The Board of the Corporation is a competent authority to take a decision for the establishment of training institutes to provide for its employees suitable conditions of service as per Section 19(1) of the Road Transport Corporation Act of 1950.

ಬಾಡಿಗೆ ನಿಯಂತ್ರಣ ಕಾಯ್ದೆಯಿಂದ ವಕ್ಫ್ ಆಸ್ತಿಗಳಿಗೆ ವಿನಾಯಿತಿ ನೀಡುವ ಬಗ್ಗೆ.

1781. ಶ್ರೀ ಎ.ಎಂ. ಹಿಂಡಸಗೇರ (ಹುಬ್ಬಳ್ಳಿ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?